ಒಪ್ಪೋದಿಲ್ಲ' ಅಂತ ಮೊದೀನ್ ಸ್ಪಷ್ಟವಾಗಿ ಹೇಳಿದ. 'ನಂಗೆ ಇರೋದು ಮೂವತ್ತೇಳು ಗುಂಟೆ ಹೊಲ. ಸಮಾಧಿಗಳಿರೊ ಹೊಲದಲ್ಲಿ ಗುಡಿ ಕಟ್ಟೋದು ಬೇಡ ಅಂದ್ರೆ ಬೇಡ. ಮುಂದೆ ನನ್ನ ಮತ್ತು ನನ್ನ ಹೆಂಡ್ತಿ ಹೆಣಗಳನ್ನೂ ಅಲ್ಲೇ ಹೂಳಬೇಕು ಅಂತ ಮಕ್ಕಳಿಗೆ ಹೇಳಿದೀನಿ' ಅಂತ ಹೇಳಿದ.

'ಹೊಸಳ್ಳಿ ಜನರಿಗೇ ಸ್ಮಶಾನ ಇಲ್ಲ. ಊರಲ್ಲಿ ಸತ್ತವರನ್ನು ಮಣ್ಣು ಮಾಡ್ತಿರೋದು ದೇವರ ಹಳ್ಳದ ಬಯಲಲ್ಲಿ. ಸತ್ತ ಮೇಲೆ ಏನಿದೆ? ಹೆಣಗಳನ್ನು ಇಟ್ಕಳಕಾಗಲ್ಲ ಅಂತ ಹೂತಾಕ್ತಾರೆ. ಶೆಟ್ರು, ಅಕ್ಕಸಾಲಿಗರು ಮಾತ್ರ ಸುಡ್ತಾರೆ. ಮೂರು ವರ್ಷಗಳ ಹಿಂದೆ ಹೂತಾಕಿದ್ದ ನಮ್ಮಪ್ಪನ ಗುಡ್ಡೆ ಎಲ್ಲಿದೆ ಅಂತ ಈಗ ಹೋಗಿ ಹುಡುಕದು ಕಷ್ಟ. ಅಲ್ಲಿ ಜಾಲಿ ಬೆಳೆದು ಕಾಡಿನಂತೆ ಆಗಿದೆ. ಸಮಾಧಿಗಳು ಮುಖ್ಯ ಅಲ್ಲ. ನೀನು ದೊಡ್ಡ ಮನಸ್ಸು ಮಾಡಬೇಕು' ಅಂತ ಕೆಲವರು ಮೊದೀನ್‌ಗೆ ಹೇಳಲು ಶುರು ಮಾಡಿದರು.

'ನಮ್ಮ ಅಪ್ಪ ಅಮ್ಮನ ಸಮಾಧಿಗಳನ್ನು ಸ್ಥಳಾಂತರ ಮಾಡಿ ಅಂದರೆ ಹೆಂಗೆ? ನಮ್ಮ ಭಾವನೆಗಳನ್ನು ಸ್ವಲ್ಪ ಅರ್ಥ ಮಾಡಿಕೊಳ್ಳಿ' ಅಂತ ಮೊದೀನ್ ಸಿಕ್ಕ ಸಿಕ್ಕವರ ಎದುರು ಹೇಳಿಕೊಳ್ಳಲು ಶುರು ಮಾಡಿದ. ಹಜ್ ಯಾತ್ರೆ ಮಾಡಿ ಬಂದಿರೊ ಮೊದೀನ್ ಸಾಬರು ಎಲ್ಲರ ಎದುರು ತಮ್ಮ ಗೋಳು ಹೇಳಿಕೊಳ್ಳುವುದನ್ನು ನೋಡಿ ಅನೇಕರು ಕನಿಕರಪಟ್ಟರು. 'ಊರಲ್ಲಿ ಜಮೀನು ಇರೋರೆಲ್ಲ ಸುಮ್ಮನಿರುವಾಗ, ಗುಡಿಗೆ ಭೂಮಿ ಕೊಡ್ತೀನಿ ಅಂತ ಮುಂದೆ ಬಂದಿರೊ ಮೊದೀನ್ ಸಾಬರಿಗೆ ಅವರಪ್ಪ ಅಮ್ಮನ ಸಮಾಧಿಗಳನ್ನು ಮುಂದಕ್ಕೆ ತಳ್ಳು ಅಂತ ಹೇಳೋದು ನ್ಯಾಯ ಅಲ್ಲ. ಅದನ್ನು ಹೊಸಳ್ಳಮ್ಮ ಮೆಚ್ಚಲ್ಲ' ಅಂತ ಕೆಲವರು ಬಾಯಿಬಿಟ್ಟು ಹೇಳಿದರು. ಇನ್ನು ಕೆಲವರಿಗೆ ಏನು ಹೇಳಬೇಕು ಅನ್ನೋದು ಗೊತ್ತಾಗದೆ ಸುಮ್ಮನಿದ್ದರು.

★★★

ಒಂದು ತಿಂಗಳು ಎಲ್ಲರೂ ಸುಮ್ಮನಿದ್ದರು. ಆಮೇಲೆ ಕೆಲವರು ತಮ್ಮ ಹಳೇ ಚಾಳಿ ಶುರು ಮಾಡಿದರು. ಮೊದೀನ್ ಸಾಬರು ಒಳ್ಳೆಯವರೇ. ಆದರೆ, ಊರವರ ಮಾತಿಗೆ ಅವರು ಬೆಲೆ ಕೊಡಲಿಲ್ಲ ಅಂತ ಹೇಳಲು ಶುರುಮಾಡಿದರು. ಕೆಲವರು ಅವರ ಆದಾಯದ ಮೂಲ ಕತ್ತರಿಸಿದರೆ ಬುದ್ಧಿ ಬರುತ್ತೆ ಅಂತ ಹೇಳಿಕೊಂಡು ಓಡಾಡಿದರು.

'ಮೊದೀನ್ ಸಾಬರು ಹಳೆ ಕಾಲದ ಟೈಲರು. ಅವರಿಗೆ ಫ್ಯಾಷನ್ ಬಟ್ಟೆ ಹೊಲಿಯಲು ಬರಲ್ಲ. ಊರಿಗೆ ಇನ್ನೊಬ್ಬ ಟೈಲರ್ ಬೇಕು' ಅಂತ ಯಾರೋ ಅಂದರು. ಮುಂದಿನ ಹದಿನೈದೇ ದಿನಗಳಲ್ಲಿ ಬಾಂಬೆ ಟೈಲರ್ಸ್ ಹೆಸರಿನ ಅಂಗಡಿಯೊಂದು ಊರಲ್ಲಿ ಶುರುವಾಯಿತು. ಹೊಸ ಟೈಲರ್ ಹೆಸರು ಭವಾನಿ ರಾವ್. ಹತ್ತು ವರ್ಷಗಳ ಹಿಂದೆ ಅವನು ಮುಂಬೈಗೆ ಹೋಗಿ ಟೈಲರಿಂಗ್ ಕಲಿತು ಬಂದಿದ್ದನಂತೆ. ಸಿನಿಮಾಗಳಲ್ಲಿ ಹೀರೊ ಹಾಕಿದ ಬಟ್ಟೆಗಳನ್ನು ಒಂದು ಸಲ ನೋಡಿದರೆ ಸಾಕಂತೆ. ಅದೇ ಥರ ಹೊಲಿದು ಕೊಡೊ ಟ್ಯಾಲೆಂಟು ಅವನಿಗಿದೆ ಅಂತ ಪ್ರಚಾರ ಆಯಿತು. ಆದರೆ, ಅವನು ಕೇಳುವ ಕೂಲಿ ದುಬಾರಿ. ಅಷ್ಟು ಕೊಡುವ ಶಕ್ತಿ ನಮಗಿಲ್ಲ ಅಂತ ಹೇಳಿ ಊರವರು ಅವನ ಹತ್ತಿರ ಬಟ್ಟೆ ಹೊಲಿಸಲು ಹಿಂಜರಿದರು. ಮೂರೇ ತಿಂಗಳಲ್ಲಿ ಅವನು ಅಂಗಡಿ ಮುಚ್ಚಿದ. ಎರಡು ತಿಂಗಳ ಅಂಗಡಿ ಬಾಡಿಗೆ ಬಾಕಿ ಉಳಿಸಿಕೊಂಡು ಇದ್ದಕ್ಕಿದ್ದಂತೆ ಕಾಣೆಯಾದ.

ಹೊಸ ಗುಡಿ ಕಟ್ಟುವ ಮಾತು ಕಡಿಮೆ ಆದವು. ಸಕಾಲಕ್ಕೆ ಮಳೆ ಬಿದ್ದಿದ್ದರಿಂದ ಊರ ಜನಕ್ಕೆ ಬಿಡುವು ಸಿಕ್ಕಲಿಲ್ಲ. ಮಾಡಲು ಏನೂ ಕೆಲಸ ಇಲ್ಲದವರು ಸುಮ್ಮನೆ ಕೂರಲಿಲ್ಲ. ಇಮಾಂ ಸಾಬರು ಗೋಮಾಳದ ಎರಡೆಕರೆ ಜಮೀನು ಕಬಳಿಸಿದ್ದಾರೆ. ಅದನ್ನು ಬಿಡಿಸಿ ಕೊಡಿ ಅಂತ ಮತ್ತೆ ಮೂಕರ್ಜಿಗಳನ್ನು ಬರೆದರು.

'ಇನ್ನಾರು ತಿಂಗಳಿಗೆ ಜನರಲ್ ಎಲೆಕ್ಷನ್ ಬರುತ್ತೆ. ಈ ಸಲದ ಎಲೆಕ್ಷನ್‌ಗೆ ಬಹಳ ಮಹತ್ವ ಇದೆ.